ಒಂದಾಣೆ ಮಾಲೆ.

89

ನಮ್ಮ ನಾಟಕಗಳು



ರಾವಣ ವೇಷಧಾರಿ.

ಲೇಖಕರು: ಶ್ರೀ| ಎಂ. ಎಸ್. ಆಚಾರ್,
ಸುರತ್ಕಲ್.

1956.

ಬೆಲೆ: ಒಂದಾಣೆ.

ಒಂದಾಣೆ ಮಾಲೆ — ಮಂಗಳೂರು

'ಒಂದಾಣೆ ಮಾಲೆ'ಯ ಪ್ರಕಟಣೆಗಳು:

೧. *ಕೆಪ್ಪಟಿರಾಯ (ವಿನೋದ ಕಥೆ)
೨. *ಸಾರೀಶ್ವರರು (ಏಕಾಂಕ ಪ್ರಹಸನ)
೩. ಕಳ್ಳನಿಗೆ ಸಂಭಾವನೆ (ದ್ವಿ. ಮುದ್ರಣ)
೪. *ಸದ್ರಿಸುಬ್ಬ (ಏಕಾಂಕ ಪ್ರಹಸನ)
೫. ಅದ್ಭುತ ತ್ಯಾಗ (ದ್ವಿತೀಯ ಮುದ್ರಣ)
೬. *ಚುನಾವಣೆ ಅರ್ಥಾತ್ ಬನಾವಣೆ
೭. *'ಬೀಡಿ ಸೇದಬೇಡಿ' ಮತ್ತು 'ಆ ಮಗು'
೮. *ಇಂಗ್ಲಿಷ್–ಕನ್ನಡ ಅರ್ಥಕೋಶ
೯. ಲಂಚಕ್ಕೆ ಸಂಚಕಾರ (ದ್ವಿ. ಮುದ್ರಣ)
೧೦. *ಟಿಶ್ಯೂ ಔಷಧಿಗಳ ಕೈಪಿಡಿ.
೧೧. *ಶ್ರೀಕ್ಷೇತ್ರ ಧರ್ಮಸ್ಥಳ (ತೃ. ಮುದ್ರಣ)
೧೨. ಜೀವದ ಮೌಲ್ಯ ಮತ್ತು ಇತರ ಕಥೆಗಳು
೧೩. ಸತ್ತವನ ಸೇಡು ಮತ್ತು ಇತರ ಕಥೆಗಳು
೧೪. *ವೆಂಕಟನ ಸಂಕಟ (ಏಕಾಂಕ ಪ್ರಹಸನ)
೧೫. ಬಾಬಿಗೆ ಬಾಸಿಂಗ (ದ್ವಿತೀಯ ಮುದ್ರಣ)
೧೬. ವೇಣೂರಿನ ಗತವೈಭವ (ದ್ವಿ. ಮುದ್ರಣ)
೧೭. ಒಗಟುಗಳು [ದ್ವಿತೀಯ ಮುದ್ರಣ]
೧೮. ಜಗಳಗಂಟಿ ಮತ್ತು ಇತರ ಕಥೆಗಳು
೧೯. ರಥೋತ್ಸವ.
೨೦. ಕರಿನಾಯಿ ಮತ್ತು ಮುಪ್ಪು
೨೧. ಭಾರತದ ಮಹಾನಗರ (ದ್ವಿ. ಮುದ್ರಣ)
೨೨. ತಿರುಕ್ಕುರಲ್ (ದ್ವಿತೀಯ ಮುದ್ರಣ)
೨೩. ಸೂರ್ಯನ ಸಂಸಾರ (ಕಥೆಗಳು)
೨೪. ಭಾರತದ ಮಹಾನಗರ (ದ್ವಿ. ಮುದ್ರಣ)
೨೫. ಧೈರ್ಯ ಮತ್ತು ಇತರ ಸತ್ಯಕಥೆಗಳು.
೨೬. ಮಾರಾವತಾರ (ದ್ವಿತೀಯ ಮುದ್ರಣ)
೨೭. ಹಾಸವಿಲಾಸ (ನಗೆಹನಿಗಳು)
೨೮. ಸತ್ಯವಂತ ಬಾಜಿ (ದ್ವಿತೀಯ ಮುದ್ರಣ)
೨೯. ಜಾಣ್ಮೆಯ ಒಗಟುಗಳು
೩೦. ಜಾತಕ ಕಥೆಗಳು
೩೧. ಕಾರ್ಕಳದ ಚರಿತ್ರೆ
೩೨. ಮರ್ಜಿ (ಏಕಾಂಕ ಪ್ರಹಸನ)
೩೩. ದರ್ಶನದ ಕಥೆಗಳು
೩೪. ಅಳುವಿನ ಹೊಳೆ ಮತ್ತು ಕೇಶವಭೂಪ
೩೫. ಶರಾಬಿನ ಸಿಪಾಯಿಗಳು (ಕಥೆ)
೩೬. ಉಪದೇಶ ಶತಕ (ನೀತಿ ವಚನಗಳು)
೩೭. ನಿಮಗೆ ಗೊತ್ತಿದೆಯೋ?
೩೮. ಚತುರ ಚಮತ್ಕಾರ
೩೯. ಸತೀ ಸಾವಿತ್ರಿ (ದ್ವಿತೀಯ ಮುದ್ರಣ)
೪೦. ಆಭರಣಗಳ ಪೆಟ್ಟಿಗೆ, ಇತರ ಕಥೆಗಳು
೪೧. ಭಾರತದ ಮಂತ್ರಿಮಂಡಲಗಳು (ದ್ವಿ.
೪೨ ಕಾಲುಬಳೆಯ ಕಥೆ [ಮುದ್ರಣ)
೪೩. ಭಾರತದ ನಾಲ್ಕು ಕಲಶಗಳು
೪೪. ವ್ಯಸನದಿಂದ ಲಾಭ ಮತ್ತು ಇತರ
೪೫. ಸುಭಾಷಿತ [ಕಥೆಗಳು
೪೬. ೧೮೫೭ರ "ಸಿಪಾಯಿ ದಂಗೆ"
೪೭. ಅಕಾಂಡ ತಾಂಡವ (ರೇಡಿಯೋ ನಾಟಕ)
೪೮. ಸಾಹಸದ ಕಥೆಗಳು.
೪೯ ಸಂಜ್ಞಾ ಜ್ಞಾನ ಕೋಶ
೫೦. ಪಂಡಿತನ ಪಿಟೀಲು (ಕಥೆಗಳು)
೫೧. ಭೋಗಯಾತ್ರೆ (ವಿನೋಬಾ ತತ್ತ್ವ)
೫೨. ಸಂಗ್ರಾಮಸಿಂಹ (ಐ। ಕಥೆ)
೫೩. ಧರ್ಮಶಿಕ್ಷಾ (ಧರ್ಮ ತತ್ವಗಳು)
೫೪. ಮಹಾತ್ಮ (ಗಾಂಧೀಜಿ)
೫೫. ಮೀರಾಬಾಯಿ (ಏಕಾಂಕ ನಾಟಕ)
೫೬. ವೀರರಮಣಿ ಕರ್ಮದೇವಿ (ಕಥೆ)
೫೭. ಅರಳಿದ ನಗು (ವಿನೋದ ಕಥೆಗಳು)
೫೮. ಸಚಿತ್ರ ಜಪಾನ್
೫೯. ಚುಟ್ಟ ಬಿಟ್ಟ ಧಿಟ್ಟ (ಏಕಾಂಕ ಪ್ರಹಸನ)
೬೦. ನಿರಪರಾಧಿ (ರಾಜಾಜಿಯವರ ಕಥೆ)

(ಪುಟ 17ಕ್ಕೆ ಮುಂದುವರಿದಿದೆ)

ಅರಿಕೆ

ಭಾರತವು ಕಲಾಪೂರ್ಣವಾಗಿ ಶೋಭಿಸಬೇಕಾದರೆ ಕಲೆಗಳಲ್ಲಿ ಹಿರಿದಾದ ನಾಟಕಕಲೆಯು ಬೆಳಗಬೇಕು. ಅದಕ್ಕಾಗಿ ಆಸೆ ಉಳ್ಳವರು ಪೂರ್ವಜರ ಹಿರಿಮೆಯನ್ನು ತಿಳಿಯಬೇಕು; ವಿಚಾರವಂತರ ಮಾತುಗಳ ಜೊತೆಗೆ ನಮ್ಮ ನಾಟಕಗಳ ಘನತೆಯನ್ನು ತಿಳಿದು, ವಿಮರ್ಶೆಯಿಂದ ಮಥನಮಾಡಿ ಕಲಾಸೇವೆ ಮಾಡಬೇಕು. “ನಾಟಕವೆಂದರೆ ಆಡಿತೋರಿಸುವುದಕ್ಕಾಗಿ, ಕೇವಲ ಓದುಗಾರಿಕೆಗಲ್ಲ.”

ನಾಟಕಕಲೆಯನ್ನು ತಿಳಿಯಲು ಅನುಕೂಲವಾಗುವಂತೆ ಸಾಹಿತ್ಯೋಪಾಸಕರು ಹಲವು ಗ್ರಂಥಗಳನ್ನು ಬರೆದಿರುವರು. ಇವುಗಳು ಕಲಾರಾಧಕನ ತಿಳಿವು, ರುಚಿ, ಗುರಿಯನ್ನು ಸರಿಪಡಿಸಿ ಮೇಲಕ್ಕೆತ್ತಿ ನೇರ ಮಾರ್ಗದಲ್ಲಿ ರಂಗೋಪಾಸನೆ ಮಾಡಲು ಬೆಳಕನ್ನು ಚೆಲ್ಲುವುವು. ಇವುಗಳಲ್ಲಿ ಸಂಸ್ಕೃತ ನಾಟಕ, ಸಮರ್ಪಣೆ, ನಾಟಕಕಲೆ, ಕನ್ನಡ ಸಾಹಿತ್ಯ ಮತ್ತು ಸಂಸ್ಕೃತಿ, ಮತ್ತು ನಮ್ಮ ರಂಗಭೂಮಿಯ ನೆರವಿನಿಂದ ಲೋಕಶಿಕ್ಷಣದ ಸಹಾಯಾರ್ಥವಾಗಿ ‘ನಮ್ಮ ನಾಟಕಗಳು’ ಎಂಬುದನ್ನು ಸಂಕಲಿಸಿರುವೆನು. ಇದರ ರೂಪಕ್ಕೆ ಒಪ್ಪಕೊಟ್ಟು ಸಹಕರಿಸಿದ ಹಿರಿಯರು ಕೃತಜ್ಞರೇ ಸರಿ. ಓದುಗರು ಇದರ ಗುಣಗ್ರಹಣಮಾಡಿ, ನಾಟಕಕಲೆಯ ಕುರಿತು ಅನುಷ್ಠಾನಮಾಡ ಬಯಸುವವರು ಮೇಲಿನ ಗ್ರಂಥ ಮೊದಲಾದುವುಗಳನ್ನು ಅವಶ್ಯ ಕಾಣಬೇಕಾದುದು ಧರ್ಮವು.

ಇನ್ನು “ಒಂದಾಣೆ ಮಾಲೆ”ಯಲ್ಲಿ ಪ್ರಕಟಿಸಿ ಇದರ ಬೆಳಕಿಗೆ ಕಾರಣಪುರುಷರಾದ ಶ್ರೀ। ಕುಡ್ಪಿ ವಾಸುದೇವ ಶೆಣೈಯವರಿಗೆ ನಾನು ಅನಂತ ಋಣಿಯಾಗಿರುವೆನು.

ಕುಳ್ಯಾ, ಸುರತ್ಕಲ್,
೧—೬—೧೯೫೬.

ಇತಿ,
ಎನ್. ಎಸ್. ಆಚಾರ್.

ನಮ್ಮ ನಾಟಕಗಳು

ನಾಟಕಕಲೆ

ದೇವನು ಒಬ್ಬನೇ ಸೂತ್ರಧಾರನು. ಸಕಲರು ಆತನ ಎಣಿಕೆಯಂತೆ ಕುಣಿಯುವ ಬೊಂಬೆಗಳು, ಹಾಡುವ ಗಾಯಕರು. ಹಾಡು ಕುಣಿಕೆಯೆಂದರೆ ಆತನಿಗೆ ಬಹು ಮೆಚ್ಚು. ಆತನ ಮೆಚ್ಚುಗೆ ಪಡೆಯುವುದೆಂದರೆ ಪರಮಾನಂದ ಪರಮಾನಂದದಲ್ಲಿ ಸತ್ಯವಿದೆ. ಸತ್ಯವೇ ದೇವರು. ದೇವರ ಸ್ವರೂಪವು ಪ್ರಕೃತಿದತ್ತವಾದ ಸೌಂದರ್ಯದಲ್ಲಿ ಲೀನವು. ಸೌಂದರ್ಯವು ಕಲೆಯಲ್ಲಿ ಸಂಪೂರ್ಣವು. ಕಲೆಗಳಲ್ಲಿ ಸಂಗೀತ, ಚಿತ್ರ, ನೃತ್ಯಗಳು ಮುಖ್ಯ. ಅವುಗಳೆಲ್ಲವು ನಾಟಕದಲ್ಲಿ ಐಕ್ಯ.

ಋಗ್ವೇದದಿಂದ ಸಾಹಿತ್ಯ, ಯಜುರ್ವೇದದಿಂದ ಅಭಿನಯ, ಸಾಮವೇದದಿಂದ ಗಾನ, ಅಥರ್ವಣವೇದದಿಂದ ರಸವನ್ನು ತೆಗೆದು 'ನಾಟ್ಯ'ವೆಂಬ ಪಂಚಮ ವೇದವನ್ನು ಬ್ರಹ್ಮನು ಸೃಷ್ಟಿಸಿದನು. ಈ ವೇದವೇ ನಾಟಕವು. ಆದುದರಿಂದ ನಾಟಕವು ಉತ್ತಮ ವಿಷಯಗಳ ಸಂಗ್ರಹವು. ಸ್ವಾರಸ್ಯವಾದ ಕಥೆ, ಇಂಪಾದ ಗಾನ, ಚೊಕ್ಕನಾದ ಮಾತು, ನೃತ್ಯ, ಹಾಸ್ಯವು ಬೆರೆತಿವೆ. ಪಂಡಿತರು 'ಕಾವ್ಯೇಷು ನಾಟಕಂ ರಮ್ಯಂ' ಎಂದಿರುವರು. ಕಾಳಿದಾಸನು ನಾಟ್ಯದ ಪ್ರಾಶಸ್ತ್ಯವನ್ನು '............ನಾಟ್ಯಂ ಭಿನ್ನರುಚೇರ್ಜನಸ್ಯ ಬಹುಧಾಪ್ಯೇಕಂ ಸಮಾರಾಧನಂ' ಎಂದಿರುವನು. ಇಂದಿನವರು 'ನಾಟಕವು ಜೀವನದ ಸತ್ಯವನ್ನು ತಿಳಿಸುವ ದಿವ್ಯ ಕಲೆಯಾಗಿದ್ದು, ರಾಗದ್ವೇಷಾದಿ ಕಲ್ಮಷಗಳನ್ನು ಕಳೆಯುವುದು; ಸಾಹಿತ್ಯದ ಪ್ರಗತಿಯನ್ನು ಅಳೆಯುವ ಮಾನದಂಡವು; ಅಲ್ಲದೆ ದೈವದ ಒಲುಮೆಗೆ ಕಾರಣವಾದ ಪೂಜಾವಿಧಾನವು' ಎಂದಿರುವರು. ಇದರಿಂದ ನಾಟಕಕಲೆಯ ಘನತೆಯು ಗೋಚರಿಸುವುದು.

ಹುಟ್ಟು

ಮನುಷ್ಯನು ಸಂತೋಷವಾದಾಗ ಕುಣಿಯತೊಡಗಿದನು. ಕುಣಿಕೆಯನ್ನು ತಾಳಲಯಬದ್ಧವಾಗಿ ಗೀತದೊಂದಿಗೆ ಸೇರಿಸಿಕೊಂಡನು. ಮೇಳದೊಂದಿಗೆ ಸೇರಿದನು. ತಾಳ ಸಂಗೀತದೊಂದಿಗ ಭಾವ, ಅಭಿನಯವು ಕೂಡಿದುವು. ಒಂಟಿಯಾಗಿ ಸುಖ, ದುಃಖದ ಭಾವವನ್ನು ಅಭಿನಯದಿಂದ ಪ್ರದರ್ಶಿಸಿದನು. ತಾಳಬದ್ಧ ಸಂಗೀತ, ಕುಣಿತ ಅಭಿನಯದೊಂದಿಗೆ ಅನುಕರಣ, ವೇಷಭೂಷಣ, ಮಾತುಕತೆ, ಸಹಾಯಕ ಪಾತ್ರಗಳು, ಪರಿಕರಗಳು ಹೊಂದಿಕೊಂಡವು; ನಾನಾ ದೃಶ್ಯ ಅಂಕಗಳನ್ನು ಕಲ್ಪಿಸಿ ನಾಟ್ಯವನ್ನು ಪ್ರದರ್ಶಿಸಿ ಪ್ರೇಕ್ಷಕರಲ್ಲಿ ವಿವಿಧ ರಸಾನುಭವಗಳನ್ನು ಉಂಟುಮಾಡತೊಡಗಿದನು. ನಾಟ್ಯದಿಂದ ಹಲವು ರೂಪಕಗಳು ಹುಟ್ಟಿದುವು. ಹಲವು ರೂಪಕಗಳಲ್ಲಿ 'ನಾಟಕ'ವು ಪ್ರಧಾನವು.

ರೂಪಕಗಳು

ರೂಪಕಗಳಲ್ಲಿ ನಾಟಕ, ಪ್ರಕರಣ, ಭಾಣಪ್ರಹಸನ, ಡಿಮ, ವ್ಯಾಯೋಗ, ಸಮವಕಾರ, ವೀಥೀ, ಅಂಕ, ಈಹಾಮೃಗಗಳೆಂದು ಹತ್ತು ವಿಧಗಳಿವೆ. ಪ್ರತಿಯೊಂದು ಬೇರೆ ಬೇರೆ ಲಕ್ಷಣಗಳಿಂದ ಕೂಡಿವೆ.

'ಪ್ರಕರಣ'ದಲ್ಲಿ ವಸ್ತುವು ಲೌಕಿಕವಾಗಿದ್ದು ಶೃಂಗಾರ ರಸ ಪ್ರಧಾನವಾಗಿದೆ. 'ಭಾಣ'ವು ಉತ್ಪಾದ್ಯ ಮತ್ತು ಧೂರ್ತನ ಚರಿತ್ರೆಯಿಂದ ಕೂಡಿದೆ. ಒಂದೇ ಅಂಕ, ಏಕಪಾತ್ರವಾಗಿದ್ದು, ವೀರ ಶೃಂಗಾರರಸವುಳ್ಳದ್ದಾಗಿದೆ. 'ಪ್ರಹಸನ'ವು ಕೀಳುಜನರ ಚರಿತ್ರೆಯನ್ನು ಒಳಗೊಂಡಿದೆ. ಇದರಲ್ಲಿ ಹಾಸ್ಯರಸವೇ ಮುಖ್ಯವು 'ಡಿಮ'ವು ಮಾಯೆ, ಇಂದ್ರಜಾಲ, ಗ್ರಹಣ ಯುದ್ಧಾದಿಗಳಿಂದ ಕೂಡಿದ್ದು, ವಸ್ತು ಪ್ರಖ್ಯಾತವಾಗಿದೆ. ನಾಲ್ಕು ಅಂಕವುಳ್ಳದ್ದಾಗಿದೆ. ಇದರಲ್ಲಿ ರೌದ್ರ ರಸವು ಪ್ರಧಾನವು. 'ವ್ಯಾಯೋಗ'ವು ಒಂದೇ ಅಂಕದಿಂದ ಕೂಡಿದೆ. ಸ್ತ್ರೀನಿಮಿತ್ತವಲ್ಲದ ಜಗಳವಿದ್ದು, ವಸ್ತುವು ಪ್ರಖ್ಯಾತವಾಗಿದೆ. ಗಂಡು ಪಾತ್ರಗಳು ಹೆಚ್ಚಿವೆ ಹಾಸ್ಯ ಶೃಂಗಾರವನ್ನು ಬಿಟ್ಟು ಉಳಿದ ರಸಗಳಿವೆ. 'ಸಮವಕಾರವು' ದೇವಾಸುರರಿಗೆ ಸಂಬಂಧಪಟ್ಟ ವಸ್ತುವಿನಿಂದ ಕೂಡಿದೆ. ವೀರರಸಪ್ರಧಾನವಾಗಿದೆ. "ವೀಥೀ'ಯು

ಒಬ್ಬ ನಾಯಕನಿಂದ ಕೂಡಿದ್ದು, ಒಂದೇ ಅಂಕವುಳ್ಳದ್ದಾಗಿದೆ. ಇದರಲ್ಲಿ ಶೃಂಗಾರರಸವು ಮುಖ್ಯವಾಗಿದ್ದು, ಉಳಿದ ರಸಗಳು ಸ್ವಲ್ಪ ಬೆರೆತಿವೆ. 'ಅಂಕ'ದಲ್ಲಿ ವಸ್ತುವು ಪ್ರಖ್ಯಾತವಾಗಿದ್ದು ಕವಿಚಮತ್ಕಾರದಿಂದ ಕೂಡಿದೆ. ಗಂಡು ಮತ್ತು ಹೆಣ್ಣು ಪಾತ್ರಗಳು ತುಂಬಾ ಇವೆ. ಸೋಲು ಗೆಲವು, ವೈರಾಗ್ಯ ವಿಚಾರದಿಂದ ಕೂಡಿದ್ದು ಕರುಣರಸಪ್ರಧಾನವಾಗಿದೆ. "ಈಹಾಮೃಗ'ವು ನಾಲ್ಕು ಅಂಕಗಳಿಂದ ಕೂಡಿದ್ದು ಮಿಶ್ರ ವಸ್ತುಗಳಿಂದ ಬೆರೆತಿದೆ. ಪ್ರತಿನಾಯಕನು ಕುಲೀನ ಸ್ತ್ರೀಯನ್ನು ಕದಿಯುವನು. ಇಲ್ಲಿ ಈತನು ಶೃಂಗಾರಾಭಾಸವನ್ನು ಪ್ರದರ್ಶಿಸುವನು.

ಒಟ್ಟಿನಲ್ಲಿ ನಾಟಕ, ರೂಪಕಗಳು ರಸವನ್ನೂ, ವಾಕ್ಯಾರ್ಥವನ್ನೂ ಅಭಿನಯಿಸುವುದು. ಈ ರೂಪಕಗಳಲ್ಲದೆ ಹದಿನೆಂಟು ಉಪರೂಪಕಗಳಿವೆ. ಇವುಗಳಲ್ಲಿ ಕಥಾವಸ್ತು ಹೆಚ್ಚಿಲ್ಲ; ರಸಪುಷ್ಟಿಯು ಬಹು ಕಡಿಮೆಯು. ಇವು ಸಣ್ಣ ಪ್ರಬಂಧವಿಶೇಷಗಳಾಗಿವೆ. ಇವುಗಳು ಭಾವ, ಪದಾರ್ಥವನ್ನು ಅಭಿನಯಿಸುವುದು. ಆದುದರಿಂದ ನರ್ತನ, ಅಭಿನಯ ಪ್ರಧಾನವಾಗಿವೆ. ಇವು ಜನಸಾಮಾನ್ಯರಲ್ಲಿ ಹೆಚ್ಚಿನ ಪ್ರಚಾರದಲ್ಲಿದ್ದವು. ಕಾಲಾನುಗುಣಗಳಿಂದ ಇವುಗಳಲ್ಲಿ ಹೆಚ್ಚುಕಡಿಮೆಯಾಗಿವೆ.

ನಾಟಕ

ಇದರಲ್ಲಿ ವಸ್ತುವೇ ಮುಖ್ಯವು. ವಸ್ತುವೆಂದರೆ ಕಥಾಭಾಗ. ಈ ಕಥಾಭಾಗದಲ್ಲಿ ಎರಡು ವಿಧವು. ಆದಿಯಿಂದ ಅಂತ್ಯದ ವರೆಗೆ ಬರುವ ಮುಖ್ಯವಾದ ಕಥೆ, ಮತ್ತು ಅದರ ಅಂಗವಾಗಿದ್ದು ಪ್ರಾಸಂಗಿಕವಾಗಿ ಬರುವ ಕಥೆ. ಪ್ರಾಸಂಗಿಕವು ದೊಡ್ಡದಾಗಿದ್ದರೆ 'ಪತಾಕಾ'ವೆಂದೂ, ಸಣ್ಣದಾಗಿದ್ದರೆ 'ಪ್ರಕರೀ' ಎನ್ನುವರು. ಅವಶ್ಯಕ ಘಟನೆಯನ್ನು ಒಳಪಡಿಸಿ ಕಥಾಭಾಗವು ದೃಶ್ಯ, ಅಂಕಗಳಿಂದ ಕೂಡಿರುತ್ತದೆ. ಸಂಭಾಷಣೆ, ಮಾತುಗಾರಿಕೆಯು ಸ್ಪಷ್ಟವಾಗಿದ್ದು, ಕಥೆಯನ್ನು ಮುಂದೋಡಿಸುವುದು. ಗದ್ಯವಾಕ್ಯಗಳು ಚಿಕ್ಕವಾಗಿದ್ದು ಸರಳ ಚೊಕ್ಕವಾಗಿವೆ. ಪದ್ಯಗಳು ಮಿತವಾಗಿರುತ್ತವೆ. ನಾಯಕ, ಪ್ರತಿನಾಯಕ, ನಾಯಕಿ, ಸಹಾಯಕರು, ಪಕ್ಷ ಪ್ರತಿಪಕ್ಷದ ಅವಶ್ಯವಿದ್ದ ಪಾತ್ರಗಳು ಇರುತ್ತವೆ. ಆಯಾ ಪಾತ್ರದ ನಟರು ಸಮಯೋಚಿತವಾಗಿ ವೇಷಭೂಷಣಗಳನ್ನು ಧರಿಸುವರು. ರಸವಾದರೂ

ನಾಟಕದ ಜೀವವೆನಿಸಿ, ಅಭಿನಯವು ದೇಹವೆನಿಸಿದೆ. ರಸಗಳು ಹಲವಿದ್ದು, ತಕ್ಕ ಅಭಿನಯದಿಂದ ಕೂಡಿವೆ. ನವರಸಗಳಲ್ಲಿ ವೀರ, ಶೃಂಗಾರಗಳೇ ಪ್ರಧಾನವು. ಒಟ್ಟಿನಲ್ಲಿ ನಾಟಕವು 'ಸಹಜ'ವಾಗಿದ್ದು ಸುಖದುಃಖಗಳಿಂದ ಕೂಡಿದ ಲೋಕಸ್ವಭಾವದ ಪೂರ್ಣವಾದ ಅಭಿನಯವು.

ವಸ್ತು

ಸಾಹಿತ್ಯವು ಶ್ರವ್ಯ ಮತ್ತು ದೃಶ್ಯಗಳೆಂದು ಎರಡು ವಿಧ. ಶ್ರವ್ಯವು ಹೆಚ್ಚಾಗಿ ರಾಜಾಶ್ರಯದಿಂದ ಬೆಳೆದುದು, ಸ್ವತಂತ್ರತೆಯಿಲ್ಲ. ರೂಪಕವು ಆಡುವಂಥಾದ್ದು. ಈ ನಾಟಕ ರಚಿಸಲು ಪೌರಾಣಿಕ, ರಾಮಾಯಣ, ಭಾಗವತ, ಭಾರತ ಮೊದಲಾದ ಧಾರ್ಮಿಕ ಗ್ರಂಥಗಳಿಂದ ವಸ್ತುವನ್ನು ಆಯ್ದರು. ವಸ್ತುವನ್ನು ಆಯ್ದು ವಿಸ್ತರಿಸಿರುವರು. ಈ ವಿಸ್ತಾರವನ್ನು ಮೂಲ ಘಟನೆಯ ಸೂಚನೆ, ಈ ಘಟನೆಯ ವಿಸ್ತಾರ, ಉಪಕಥೆ, ಪ್ರಾಸಂಗಿಕ ವೃತ್ತಾಂತ, ಮತ್ತು ಪರಿಣಾಮವೆಂದು ವಿಭಾಗಿಸಿರುವರು. ರಂಗದಲ್ಲಿ ಪ್ರದರ್ಶಿಸಲು ಅನುಚಿತವಾದ, ಕೊಲೆ, ಯುದ್ಧ, ಸ್ನಾನ, ಊಟ, ಬಟ್ಟೆ ಧರಿಸುವಿಕೆ, ನಿದ್ರಿಸುವಿಕೆ, ಇತ್ಯಾದಿಗಳನ್ನು ಅರ್ಥೋಪಕ್ಷೇಪಕಗಳಿಂದ ಬಾಯ್ದೆರೆಯಾಗಿ ಸೂಚಿಸಿರುವರು. ಅಲ್ಲದೆ ನಾಯಕನ ಕೊಲೆ, ಮತ್ತು ಅಶ್ಲೀಲವೆನಿಸಿದ ಭಾಗವನ್ನು, ವರ್ಣನೆ ಮಾತ್ರವಲ್ಲದೆ, ಸೂಚಿಸುವುದು ಕೂಡಾ ನಿಷೇಧಿಸಿದ್ದರು. ವಸ್ತುವಿನ ಮಾತುಗಳಲ್ಲಿ ಪ್ರಕಾಶ, ಸ್ವಗತ, ಒಬ್ಬರನ್ನು ಮರೆಮಾಡಿ ಮಗುದೊಬ್ಬರೊಡನೆ ಆಡುವುದು, ಗೌಪ್ಯ ಮಾತಾಡುವುದು, ಕೇಳಿದಂತೆ ನಟಿಸಿ ಮಾತಾಡುವ ರೀತಿಗಳು ಇವೆ. ಹೀಗೆ ಕೆಲವು ನಿಯಮಗಳನ್ನು ಅನುಸರಿಸಿ ಕಥೆಯನ್ನು ನಾಟಕ ರೂಪದಲ್ಲಿ ಬರೆದರು. ಕ್ರಮೇಣ ಮಹಾಪುರುಷರ ಜೀವನದ ಮೇಲೂ, ಐತಿಹಾಸಿಕ ವಿಜಯದ ಮೇಲೂ ಭಕ್ತಿಪರ ಮತ್ತು ಚಾರಿತ್ರಿಕ ನಾಟಕಗಳನ್ನು ಚಿತ್ರಿಸಿದರು. ಆಧುನಿಕರಲ್ಲಿ ಇಂಗ್ಲಿಷ್ ಸಾಹಿತ್ಯವು ತನ್ನ ಪ್ರಭಾವವನ್ನು ಬೀರಿತು. ಕವಿಗಳು ಹಳೆಯ ಸಾಹಿತ್ಯದ ಮೇಲೆ ಹೊಸ ದೃಷ್ಟಿ ಚೆಲ್ಲಿದರು; ಹಳೆಯ ಕಿಲುಬನ್ನು ತೊಳೆದರು. ಪುಣ್ಯಕಥೆಗಳ ವ್ಯಕ್ತಿಗಳನ್ನು ಅಚ್ಚ ಹೊಸದುತನದಲ್ಲಿ ಕಂಡರು, ಅದನ್ನು ಕೃತಿಯಲ್ಲಿ ಮೂಡಿಸಿದರು. ಅಲ್ಲದೆ

ಸಾಮಾಜಿಕ ಜೀವನ, ವಿವಿಧ ವಸ್ತು, ಶಿಕ್ಷಣ, ಸಮಸ್ಯಾಪರಿಹಾರವನ್ನು ನಾಟಕದಲ್ಲಿ ತಂದರು.

ನಾಟಕವು ಪಂಡಿತ ಪಾಮರರಿಬ್ಬರಿಗೂ ರಂಜಕವು. ಮನಸ್ಸಿನ ಜಾಡನ್ನು ತೊಳೆದು, ನಿತ್ಯ ದಿವ್ಯಾನಂದವನ್ನು ಒದಗಿಸುವ ಚೇತನ ನಾಟಕಕ್ಕಿರುವುದು. ಇದನ್ನು ತಿಳಿದು ಪ್ರಗತಿಶೀಲರು ಬಹುಮುಖದಿಂದ ನಾಟಕವನ್ನು ಬೆಳಗಿಸಲು ಶ್ರಮಿಸುವರು.

ರಸ

ರಸವು ಜೀವ ಮತ್ತು ಗುಣವುಳ್ಳದ್ದಾಗಿದೆ, ಅನಂತತೆಯ ಸ್ವರೂಪವನ್ನು ಕೊಡಬಲ್ಲುದಾಗಿದೆ. ರಸವಿದ್ದಲ್ಲಿ ಪರಮಾತ್ಮನಿದ್ದಾನೆ. ನಾಟಕವು ಸಾಹಿತ್ಯದಲ್ಲಿ ಹಿರಿದೆನಿಸಿದೆ. ಈ ಕಲೆಯ ಸಾರವೇ ರಸವು. ರಸವನ್ನು ಪ್ರಾಚೀನರು ಒಂಭತ್ತು ವಿಧವಾಗಿ ವಿಂಗಡಿಸಿರುವರು. ಶೃಂಗಾರ, ಹಾಸ್ಯ, ಕರುಣ, ರೌದ್ರ, ವೀರ, ಭಯ, ಭೀಭತ್ಸ, ಅದ್ಭುತ, ಶಾಂತವೆಂದು ಒಂಭತ್ತು ವಿಧವು. ಈ ರಸಗಳು ಕಥಾವಸ್ತುವಿನ ಮೂಲಕ ಪ್ರಕಟಗೊಳ್ಳುವುವು. ಕಥಾವಸ್ತುವು ರಸಾತ್ಮಕವಾದ ವಾಕ್ಯಗಳಲ್ಲಿ ಮೂಡಿರುವುದು. ಯೋಗ್ಯ ನಟನು ರಸ ನಿರ್ಮಾತೃವಿನ ಗುರಿಯನ್ನರಿತು, ಮಾತನ್ನು ತಕ್ಕ ಧ್ವನಿಯುಕ್ತವಾಗಿ ಹೇಳಿ, ಅಂಗಾಭಿನಯದಿಂದ ವ್ಯಕ್ತಪಡಿಸುವನು. ಆಗ ನೋಡುವವರ ಮನಸ್ಸಿನಲ್ಲಿ ಭಾವರಸಗಳ ಅನುಭವ ಉಂಟಾಗುವುದು. ಈ ಅನುಭವ ಸಿದ್ಧಿಯಾಗಬೇಕಾದರೆ ನೋಟಕರು ತನ್ನತನವನ್ನು ಮರೆತು, 'ತಲ್ಲೀನತೆ' ಹೊಂದಬೇಕು. ಕಲಾವಿದನಷ್ಟೇ ರಸವೇತ್ತರಾಗಿರಬೇಕು. ಆಗ ಮಾತ್ರ ಆನಂದ ಲಭಿಸಿ ಬದುಕು ಸಾರ್ಥಕವಾಗುವುದು.

ಅಭಿನಯ

ಅಭಿನಯವು ಒಂದು ಕಲೆಯು. ಈ ಕಲೆಯು ನಾಟಕದ ದೇಹವು. ನಾಟಕಕಾರನು ವಸ್ತುವನ್ನು ವಿವಿಧ ಪಾತ್ರಗಳಲ್ಲಿ ಹೊಂದಿಸುವನು. ವಸ್ತು ಆಲಂಕಾರ, ಗುಣದೋಷ, ಪ್ರಯೋಗಿಸುವ ವಿಧಾನ, ಭಾಷೆ, ಮಾತುಗಳೆಲ್ಲವು ವಾಚಿಕಾಭಿನಯವು. ಪಾತ್ರಧಾರಿಯು ರಂಗದಲ್ಲಿ ಕಣ್ಣು, ತಲೆ,

ಕೈ, ಕಾಲು ಅಂಗಾಂಗಗಳನ್ನು ಚಲಿಸಿ ನಟಿಸುವನು. ಈ ಚಲನೆಯು ಆಂಗಿಕಾಭಿನಯವು. ಪಾತ್ರಧಾರಿಯು ಸಿದ್ಧತೆಗೆ ಸೇರಿದ, ಉಡುಪು, ತೊಡುಪು, ಆಭರಣ ಮುಂತಾದ ಅಲಂಕಾರಗಳೂ, ಅಂಗರಚನೆಗೆ ಅಗತ್ಯವುಳ್ಳ ವಸ್ತುಗಳೂ, ದೃಶ್ಯದ ಉಪಯುಕ್ತ ಸಲಕರಣೆಗಳೂ, ಕೃತಕ ಪ್ರಾಣಿ ರಚನೆಗಳೂ ಆಹಾರ್ಯಾಭಿನಯವು. ರಂಗದಲ್ಲಿ ಪಾತ್ರಕ್ಕನುಗುಣವಾಗಿ ಪ್ರದರ್ಶಿಸುವ ಭಾವಗಳು ಸಾತ್ವಿಕಾಭಿನಯವು. ಈ ನಾಲ್ಕು ಅಂಗಗಳೇ ನಾಟಕಕ್ಕೆ ಜೀವವನ್ನು ಕೊಡುವುದು.

ಭಾವ ಪ್ರಕಾಶನಕ್ಕೆ ಸಾಧನವಾದ ಅಭಿನಯಕಲೆಯನ್ನು ನಟನು ಅವಲೋಕನ ಹಾಗೂ ಅಭ್ಯಾಸದಿಂದ ಸಿದ್ಧಿಸಿಕೊಳ್ಳುವನು. ಸುಖ, ದುಃಖ, ಕೋಪ, ಛಲ, ತಾಪ, ಭಯ, ಭಕ್ತಿ, ಉದಾರತೆ, ಆಲೋಚನೆ, ದಿಟ್ಟತನ, ಅಸೂಯೆ, ಪರಿಹಾಸ್ಯ, ರಹಸ್ಯ, ಸಂತಾಪ, ಪ್ರೇಮ, ಆಶ್ಚರ್ಯ ಮೊದಲಾದ ಭಾವರಸಗಳನ್ನು ಧ್ವನಿಯ ಏರಿಳಿತ ಮತ್ತು ವಿವಿಧ ಅಭಿನಯಗಳಿಂದ ಹೊರಗೆಡಹುವನು.

ಅಭಿನಯದಲ್ಲಿ ನಟನು ಕಣ್ಣುಗಳನ್ನು ಸಂತೋಷವಾದಾಗ ಶಾಂತವಾಗಿಯೂ, ಕೋಪಗೊಂಡಾಗ ಕೆಂಪಗಾಗಿಯೂ, ಕುಚೇಷ್ಟೆಯಲ್ಲಿರುವಾಗ ಚಂಚಲವಾಗಿಯೂ, ಆಲಸ್ಯವಾದಾಗ ಜಡವಾಗಿಯೂ, ದುಃಖಗೊಂಡಾಗ ನೀರು ಸುರಿಸಿಯೂ, ಆಶ್ಚರ್ಯವಾದಾಗ ದೊಡ್ಡದಾಗಿಯೂ ತೋರ್ಪಡಿಸುವನು.

ತಲೆಯನ್ನು ಆಲೋಚನೆಯಲ್ಲಿರುವಾಗ ಅಲ್ಲಾಡಿಸಿಯೂ, ಗರ್ವದರ್ಪದಲ್ಲಿರುವಾಗ ಎತ್ತಿಯೂ ಅಭಿನಯಿಸುವನು.

ಛಲ ಮತ್ತು ವೈರತ್ವವನ್ನು ತೋರ್ಪಡಿಸುವಾಗ ಒಂದು ಕೈಯನ್ನು ಸೊಂಟದ ಮೇಲಿರಿಸಿ ಮತ್ತೊಂದು ಕೈಯಿಂದ ಮೀಸೆಯನ್ನು ಹುರಿಮಾಡುವನು. ಮನಸ್ಸಿನಲ್ಲಿ ಗೊಂದಲವೆದ್ದಾಗ ಎರಡು ಕೈಗಳನ್ನು ಹಿಂದಕ್ಕೆ ಬಿಗಿಯುವನು. ಪರಾಕ್ರಮವನ್ನು ಕಾಣಿಸುವಾಗ ಎರಡು ಕೈಗಳಿಂದ ಭುಜಗಳನ್ನು ತಟ್ಟುವನು. ಬಿಚ್ಚಿದ ಕೈಗಳಿಂದ ಆಶ್ಚರ್ಯವನ್ನು ಸೂಚಿಸುವನು.

ಮನಸ್ಸಿನಲ್ಲಿ ಹೋರಾಟವೆದ್ದಾಗ ನಟನ ಕಾಲುಗಳು ಅತ್ತಿಂದಿತ್ತ ಇತ್ತಿಂದತ್ತ ಚಲಿಸುವವು ದೈನ್ಯದಲ್ಲಿ ಮೊಣಕಾಲು ಬಾಗುವುದು.

ದಿಟ್ಟತನದಲ್ಲಿ ಒಂದು ಕಾಲು ಪೀಠದ ಮೇಲಿರುವುದು. ಇವೇ ಮೊದಲಾದ ಅಭಿನಯಗಳನ್ನು ನಟನು ಪಾತ್ರಕ್ಕನುಗುಣವಾಗಿ ಪ್ರದರ್ಶಿಸುವನು. ಆಗ ನಟನು ತನ್ನತನವನ್ನು ಮರೆಯುವನು. ಪ್ರೇಕ್ಷಕರು ರಸವನ್ನು ಸುಲಭದಲ್ಲಿ ಅನುಭವಿಸುವರು. ಆದುದರಿಂದ ತಪ್ಪುಗಳಿಲ್ಲದ ಸಹಜ ಅಭಿನಯದ ಮೂಲಕ ನಾಟಕಕ್ಕೆ ಲೋಕ ಶಿಕ್ಷಣದಲ್ಲಿ ಪ್ರಮುಖಸ್ಥಾನವಿದೆ.

ಸಂಗೀತ

ಲಲಿತಕಲೆಗಳಲ್ಲಿ ಸಂಗೀತವು ಒಂದು. ಪದವು ತಾಳಲಯ ಬದ್ಧವಾಗಿ ರಾಗದೊಂದಿಗೆ ಬೆರೆತಾಗ ಸಂಗೀತವೆನಿಸುವುದು. ನಾಟಕಕಲೆಯಲ್ಲಿ ಆದಿಯಿಂದಲೂ ಸಂಗೀತವು ಸೇರಿರುವುದು. ಮೊದಲು ನಟರು ಆಡಿ, ಹಾಡಿ, ಕುಣಿಯುತಿದ್ದರು.

ನಾಟ್ಯಗಳುಳ್ಳ ಬಯಲಾಟದಲ್ಲಿ ಹಾಡುವವರು ಬೇರೆ, ಆಡುವವರು ಬೇರೆ. ಹಾಡುವವನನ್ನು ಸಂಗೀತಗಾರ, ಅಥವಾ ಭಾಗವತರೆನ್ನುವರು. ಮಧ್ಯ ಮಧ್ಯದಲ್ಲಿ ಆಡುವವರು ಸ್ವರ ಕೂಡಿಸುವರು; ಅರ್ಥ ವಿವರಿಸುವರು.

ಕೇರಳದ ಕಥಕ್ಕಳಿಯಲ್ಲಿ ಭಾಗವತನು ಹಾಡುತ್ತಾನೆ. ನಟನು ಮೂಕವಾಗಿ ಅಭಿನಯಿಸುತ್ತಾನೆ.

ಕೆಲವು ಕಾಲದ ಹಿಂದೆ ನಾಟಕದಲ್ಲಿ ಐವತ್ತಕ್ಕಿಂತಲೂ ಮಿಕ್ಕಿ ಹಾಡುಗಳಿದ್ದವು. ಪ್ರೇಕ್ಷಕರು ಸಂಗೀತವನ್ನು ಮನೋರಂಜನೆಯ ಸಾಧನವೆಂದು ತಿಳಿದಿದ್ದು, ಅದನ್ನೆಲ್ಲಾ ಸಹಿಸುತಿದ್ದರು. ಕ್ರಮೇಣ ಹಾಡಿನ ಸಂಖ್ಯೆ ಕಡಿಮೆಯಾಯಿತು. ಶಾಸ್ತ್ರೀಯ ಸಂಗೀತದ ಬದಲಿಗೆ 'ಸಿನೇಮಾ ರಾಗ' ಸೇರಿತು! ಇತ್ತೀಚೆಗೆ ಗದ್ಯಮಯವಾದ ಸಾಮಾಜಿಕ ನಾಟಕಗಳು ಹುಟ್ಟಿದವು. ಇದಕ್ಕೆ ಪಾಶ್ಚಾತ್ಯರ ಅನುಕರಣೆ ಹಾಗೂ ನಟರ ಅಸಡ್ಡೆಯೇ ಕಾರಣವು. ಹೀಗೆ ಶಾಸ್ತ್ರೀಯ ಸಂಗೀತವು ಮೂಲೆಸೇರಿತು. ಆದರೆ, ಸಂಗೀತವು ಯಾವುದಾದರೂ ಸ್ಮರಣೆಯನ್ನು ಕೊನೆತನಕ ಜೀವಂತ ಇರಿಸುವುದು. ನಾಟಕಕ್ಕೆ ಕಳೆತುಂಬಬೇಕಾದರೆ ಸಂಗೀತವು ಬೇಕು. ಸಂದರ್ಭೋಚಿತವಾಗಿ ಆಯಾ ಪಾತ್ರಕ್ಕೆ ಒಪ್ಪುವ ಶಾಸ್ತ್ರೀಯ ಸಂಗೀತವಿರಬೇಕು. "ಬಣ್ಣವಿಲ್ಲದ ಚಿತ್ರವು ಶೋಭಿಸುವುದಿಲ್ಲ. ಅಂತೆಯೇ ಪದ್ಯವಿಲ್ಲದ ನಾಟಕವು ರಂಗದಲ್ಲಿ ಚೆನ್ನಾಗದು."

ಪಾತ್ರಗಳು

ಹಲವು ಪಾತ್ರಗಳು ನಾಟಕದಲ್ಲಿವೆ. ಪ್ರತಿ ಪಾತ್ರದ ಲಕ್ಷಣ, ಸ್ವಭಾವ, ಗುಣಗಳು ಬೇರೆಯಾಗಿವೆ. ಒಂದರ ಪ್ರತಿರೂಪ ಮತ್ತೊಂದೆನ್ನ ಬಹುದು. ಒಳ್ಳೆಯದರ ಗುಟ್ಟು, ಪ್ರತಿರೂಪದಿಂದ ರಟ್ಟಾಗುವುದು. ಕಥೆಯನ್ನು ಹೊಂದಿಕೊಂಡು ಪಾತ್ರಗಳು ಸೇರುವುವು. ನಾಟಕವು ದುಃಖಾಂತ, ಸುಖಾಂತವೆಂದು ಎರಡು ವಿಧದಲ್ಲಿ ಕೊನೆಗೊಳ್ಳುವುದು. ಅದಕ್ಕನುಸರಿಸಿ ಪಾತ್ರಗಳಲ್ಲಿ ಲಕ್ಷಣ ಸ್ವಭಾವವು ಕೂಡಿಕೊಳ್ಳುವುದು.

ರುದ್ರನಾಟಕದಲ್ಲಿ ನಾಯಕನು ಲಕ್ಷಣ, ಶೀಲವಂತನಾಗಿದ್ದರೂ, ಏನೋ ಒಂದು ಕಾರಣದಿಂದ ಕ್ರೂರ ವಿಧಿಮಹಿಮೆಯಿಂದ ಕಷ್ಟಕ್ಕೊಳಗಾಗಿ ಮರಣಹೊಂದುವನು. ಆತನ ಕುರಿತು 'ಅಯ್ಯೋ!' ಎನ್ನಿಸುವುದು.

ಈತನು ಸಾಮಾನ್ಯ ಮಾನವರಂತಿದ್ದು ಲೋಕ ಕ್ಷೇಮಾರ್ಥವಾಗಿ ದುಡಿಯುತ್ತಾ, ಕೊನೆಗೆ ಆತನ ವಿರೋಧಿಗಳಿಂದ ದುರ್ಮರಣಕ್ಕೆ ಒಳಗಾಗುವನು ಆತನ ಸಾವಿನೊಂದಿಗೆ ಆತನನ್ನು ಅವತಾರ ಪುರುಷನೆಂದು ಆರಾಧಿಸತೊಡಗುವರು.

ಇನ್ನೊಂದು ತರದ ನಾಯಕನು ದೇವನಲ್ಲಿ ಅಚಲ ಭಕ್ತಿವಿಶ್ವಾಸವುಳ್ಳವನು; ಸುಖ–ದುಃಖವನ್ನು ಸಮಾನವಾಗಿ ಕಂಡುಕೊಂಡು, ಆತ್ಮವಿಶ್ವಾಸವುಳ್ಳವನಾಗಿರುವನು. ಆತನು ಕಷ್ಟದಲ್ಲಿಯೂ ಧೃತಿಯನ್ನು ತಂದುಕೊಳ್ಳುವನು. ಈತನ ಕುರಿತು ಕರುಣಾರಸವು ಹುಟ್ಟುವುದು.

ನಾಯಕನ ಪಾತ್ರವು ಸದ್ವಂಶ, ವಿದ್ಯಾವಂತ, ಸಮರ್ಥ, ತ್ಯಾಗಿ, ಬುದ್ಧಿವಂತನ ಲಕ್ಷಣದಿಂದ ಕೂಡಿರುವುದು. ಪ್ರತಿನಾಯಕನು ಹೆಚ್ಚಾಗಿ ಸ್ವಸುಖವನ್ನೇ ಬಯಸಿ, ಬೇರೆಯವರ ಸರ್ವನಾಶಮಾಡಲು ಹಿಂಜರಿಯುವುದಿಲ್ಲ. ಅಹಂಕಾರ, ಛಲ, ಮಾಯಾ ಮೋಸಗಳಿಂದ ಕೂಡಿದವನಾಗಿ, ತನ್ನನ್ನು ಶ್ಲಾಘಿಸಿಕೊಳ್ಳುವನು. ಕೊನೆಗಾಲದಲ್ಲಿ ತನ್ನ ಮಾರ್ಗವೇ ಸರಿಯೆಂದು ಹೇಳುವನು; ಸಾವನ್ನು ತಂದುಕೊಳ್ಳುವನು. ನಾಯಕರ ಪಾತ್ರವನ್ನು ಉದಾತ್ತ, ಉದ್ಧತ, ಲಲಿತ, ಶಾಂತವೆಂದು ವಿಂಗಡಿಸಿರುವರು.

ನಾಯಿಕೆಯು ನಾಟಕದ ಪ್ರಧಾನ ಸ್ತ್ರೀ ಪಾತ್ರ. ಈ ಪಾತ್ರವು ಕಥೆಯನ್ನು ಹೊಂದಿಕೊಂಡು, ಪತಿವ್ರತೆ, ವೇಶ್ಯೆ ಮತ್ತು ಇತರಳು ಎಂಬ ಲಕ್ಷಣ

ದಿಂದ ಕೂಡಿರುವುದು. ನಾಯಕನನ್ನು ಅನುವರ್ತಿಸಲೂ ಬಹುದು ಇಲ್ಲವೆ ವಿರೋಧಿಸಲೂಬಹುದು. ಅಲ್ಲದೆ, ಆತನನ್ನು ಅಡ್ಡದಾರಿಗೆ ಇಳಿಸಲೂ ಬಹುದು; ಅಥವಾ ತಾನು ಆ ದಾರಿ ಹಿಡಿಯಬಹುದು. ನೋಡುವವರಿಗೆ ಆ ಪಾತ್ರವು ಗೌರವ, ಅನಾದರವನ್ನು ಹುಟ್ಟಿಸುವುದೂ ಇದೆ.

ನಾಟಕದಲ್ಲಿ ನಾಯಕ, ನಾಯಿಕೆಯರಲ್ಲದೆ ಇತರ ಹಲವು ಸಹಾಯಕ ಪಾತ್ರಗಳು ಇವೆ. ಈ ಪಾತ್ರಗಳು ನಾಯಕ ನಾಯಿಕೆಯರನ್ನು ಹೊಂದಿವೆ. ಮಂತ್ರಿ, ಮಿತ್ರ, ವಿದೂಷಕ, ಯೋಧ, ಸೇವಕ, ಯೋಗಿ, ವಿಟ, ಸಖಿ, ಸೇವಕಿ, ಯೋಗಿನಿ ಇತ್ಯಾದಿ ನಾಟಕದಲ್ಲಿ ಬರುವ ಸಹಾಯಕ ಪಾತ್ರಗಳು.

ಪುರಾತನ ನಾಟಕದಲ್ಲಿ ಸೂತ್ರಧಾರನೆಂಬ ಪ್ರತ್ಯೇಕ ಪಾತ್ರವಿತ್ತು. ಈ ಪಾತ್ರಧಾರಿಯು ನಾಟಕದ ಕಥೆಯು ತಿಳಿವುದಕ್ಕಾಗಿ ರಂಗದ ಮೇಲೆ ಬರುತಿದ್ದನು. ಈಗ ಸೂತ್ರಧಾರನ ಬದಲಿಗೆ, ನಾಟಕದ ಮುಖ್ಯಪಾತ್ರ, ಸಹಾಯಕ ಪಾತ್ರಗಳಿಂದಲೇ ಕಥೆಯನ್ನು ಓಡಿಸುವ ವಿಧಾನವು ಬಳಕೆಗೆ ಬಂದಿದೆ.

ನಾಟಕದಲ್ಲಿ ಬರುವ ಪ್ರತಿಪಾತ್ರಗಳು, ವಿಚಾರ, ಜೀವನ, ಕೃತಿಗಳಲ್ಲಿ ವೈಶಿಷ್ಟ್ಯಪೂರ್ಣವಾಗಿರುವುವು. ವ್ಯಕ್ತಿತ್ವವು ಸ್ಪಷ್ಟವಾಗಿ ಕಾಣುವುದು. ಪಾತ್ರಗಳ ಸೃಷ್ಟಿಯು ನಾಟಕಕಾರನ ತಪಸ್ಸಿನ ಫಲವು, ಆ ಸಿದ್ಧಿಯೇ ನಾಟಕವು.

ಭಾಷೆ

ಮೊದಲು ನಾಟಕವು ಗಾನಪ್ರಧಾನವಾಗಿತ್ತು. ಆಗ ನೃತ್ಯಕ್ಕೆ ಪ್ರಾಶಸ್ತ್ಯ ಹೆಚ್ಚು. ಮುಂದೆ ನೃತ್ಯದ ಸ್ಥಾನ ಕಡಮೆಯಾದಾಗ ನಾಟಕದಲ್ಲಿ ರಸ ಮತ್ತು ಆಧಾರವಾದ ಕಥೆಯು, ಪಾತ್ರಗಳಾಡುವ ಸಂಭಾಷಣೆ ಮತ್ತು ಮಾತು ಬೆಳೆಯಿತು. ಗದ್ಯದ ಸ್ಥಾನ ಹೆಚ್ಚಿತು. ರಸಾದಿಗಳ ಔಚಿತ್ಯವನ್ನನುಸರಿಸಿ, ಮೃದು ಕಠಿಣತೆಯ ಶೈಲಿಯ ಮಾತುಕೂಡಿತು. ಅರಮನೆಯ ರಾಜರಿಗೆ, ಅಂತಃಪುರದವರಿಗೆ, ಮಂತ್ರಿಗಳಿಗೆ, ಸೈನಿಕರಿಗೆ, ಪ್ರಜೆಗಳಿಗೆ, ನಾಯಕಿ, ದಾಸಿಯರಿಗೆ, ವಿನೋದಪಟುವಿಗೆಂದು ಉಚ್ಚ ಮತ್ತು ಸಾಮಾನ್ಯ ಭಾಷೆಗಳನ್ನು ನಾಟಕದಲ್ಲಿ ಸೇರಿಸಿಕೊಂಡರು. ಈ ನಾಟಕಗಳು ಮೇಲು ವರ್ಗದವರನ್ನು ರಂಜಿಸಿದವು, ಜನಸಾಮಾನ್ಯರಿಗೆ ಕಬ್ಬಿಣದ ಕಡಲೆಯಾಯಿತು ಇದಕ್ಕೆ ರಾಜಮನ್ನಣೆಯೇ ಕಾರಣವು.

ಆಧುನಿಕರ ದೃಷ್ಟಿ ಚಿಗುರಿತು. ಜನಸಾಮಾನ್ಯರ ಭಾಷೆ, ಭಾವ, ವಿಚಾರಗಳಿಂದ ಕೂಡಿ ವಿಕಾಸ, ವಿಹಾರಗಳ ಸಾಧನವನ್ನಾಗಿಸಬೇಕೆಂದು ಕಂಡರು. ಜನತೆಯ ಭಾಷೆಯ ಕೃತಿಗಳೆನಿಸಿದ ಸಾಮಾಜಿಕ ನಾಟಕವು ಬೆಳೆಯುತ್ತಲಿದೆ. ಈ ನಾಟಕವು ಪಾಶ್ಚಾತ್ಯರ ಅನುಕರಣೆಯಲ್ಲಿ ಪದ್ಯವಿರಹಿತ ಗದ್ಯನಾಟಕವು ಎನ್ನಲ್ಪಟ್ಟಿದೆ. ಈ ನಾಟಕದಲ್ಲಿ ಆಂಗ್ಲ ಭಾಷೆಯ ಪ್ರಸ್ತಾವ ಹೆಚ್ಚಿದೆ. ಆಂಗ್ಲ ಪದದ ಗಾಳಿಯಿಲ್ಲದ ಹಳ್ಳಿಗರಿಗೆ ಈ ಕ್ರಾಂತಿಯಿಂದ ಲಾಭ ದೊರೆಯದು. ನಾಟಕವು ಜನಪ್ರಿಯವಾಗಬೇಕಾದರೆ, ಆಯಾ ಪ್ರದೇಶದ ಸಾಮಾನ್ಯ ಜನರು ಬಳಸುವ ಮಾತುಗಳಿಂದಲೇ ರೂಪುಗೊಳ್ಳಬೇಕು. ಆಗ ನಟರಿಗೂ, ಪ್ರೇಕ್ಷಕರಿಗೂ ಎಲ್ಲಾ ತರದಲ್ಲೂ ಸೌಲಭ್ಯ ದೊರಕುವುದು.

ನಟರು

ನಾಟಕವನ್ನು ಅಭಿನಯಿಸುವವರಿಗೆ 'ನಟ'ರೆನ್ನುವರು. ಹಾಡು, ಕುಣಿಕೆ ಅಭಿನಯವನ್ನು ಶಾಸ್ತ್ರೀಯವಾಗಿ ಬಲ್ಲವನು ಮಾತ್ರ ನಟನಾಗಲು ಅರ್ಹನು. ನಟರಲ್ಲಿ ಸೂತ್ರಧಾರನು ಹಿರಿಯನು. ಈತನು ಎಲ್ಲವನ್ನು ಬಲ್ಲವನು. ನಾಟಕದಲ್ಲಿ ನಟರು ಗಂಡು ಪಾತ್ರವನ್ನು ಅಲ್ಲದೆ, ಸ್ತ್ರೀ ಪಾತ್ರವನ್ನು ಕೂಡಾ ವಹಿಸುವರು. ನಾಟಕದ ಪಾತ್ರದ ಸ್ವಭಾವವನ್ನು ತಿಳಿದು, ಪಾತ್ರವಹಿಸಿಕೊಳ್ಳುವರು. ನಾಟಕದ ಅಳಿವು ಉಳಿವು ನಟರನ್ನು ಹೊಂದಿರುವುದು. ನಟರಿಗೆ ನಾಟಕ ಕಲೆಯಲ್ಲಿರುವ ಶ್ರದ್ಧೆಯು ನಾಟಕದ ಸ್ಥಾನಮಾನವನ್ನು ಹೆಚ್ಚಿಸುವುದು.

ಹಿಂದೆ ನೃತ್ಯದಲ್ಲಿ ನಟರೊಂದಿಗೆ ನಟಿಯರು ಭಾಗವಹಿಸುತಿದ್ದರು. ಇತ್ತೀಚೆಗೆ ಕಲೆಯ ಮೇಲಿನ ಅಭಿಮಾನದಿಂದ, ಸ್ತ್ರೀ ಪಾತ್ರವನ್ನು 'ಕಂಪೆನಿ'ಗಳಲ್ಲಿ ಸ್ತ್ರೀಯರು ವಹಿಸುವುದು ಉಂಟು. ಆದರೆ ಅಷ್ಟೊಂದು ಮುಂದೆ ಬಂದಿಲ್ಲ. ಅವರ ಸಂಕುಚಿತ ಭಾವನೆ, ಅಳುಕು ಸ್ವಭಾವವೇ ಕಾರಣವು. ಬಯಲಾಟದಲ್ಲಿ ಸ್ತ್ರೀ ಪಾತ್ರವನ್ನೇ ಮಾಡತಕ್ಕ ನಟರಿರುವರು. ಇವರ ವೇಷ, ಭೂಷಣ, ಮಾತು, ನಟನೆಯು ಸ್ತ್ರೀ ಸಹಜವಾಗಿರುವುದು. ಶಾಲಾ ಕಾಲೇಜುಗಳಲ್ಲಿ ಕೂಡಾ ಸ್ತ್ರೀ ಪಾತ್ರವನ್ನು ತರುಣರೇ ವಹಿಸುವರು. ಆಯಾ ಪಾತ್ರದ ಪ್ರಾಯಕ್ಕೆ ತಕ್ಕವರೇ ಆಯಾ ಪಾತ್ರವನ್ನು ವಹಿಸುವುದು ತಕ್ಕುದೆಂದು ಹೇಳಬಹುದು.

ಪ್ರೇಕ್ಷಕರು

ನಾಟಕವನ್ನು ಚೆನ್ನಾಗಿ ನೋಡುವವರು ಪ್ರೇಕ್ಷಕರು. ಇವರು ಏಕ ಮನಸ್ಸಿನಿಂದ, ಇಂದ್ರಿಯ ಶುದ್ಧರಾಗಿದ್ದು, ಊಹಾಪೋಹ ವಿಶಾರದರಾಗಿ, ಅನುರಾಗವುಳ್ಳವರೂ, ದೋಷವನ್ನು ನಿರ್ದಾಕ್ಷಿಣ್ಯವಾಗಿ ಹೇಳತಕ್ಕವರೂ ಆಗಿರುವರು. ಸುಖ ದುಃಖದಲ್ಲಿ ಭಾಗಿಗಳಾಗಿ, ದೈನ್ಯದಲ್ಲಿ ದೀನತ್ವ ತಾಳು ವರು. ಒಟ್ಟಿನಲ್ಲಿ ಪ್ರೇಕ್ಷಕರು ಜ್ಞಾನಿಗಳು, ಅಲ್ಲದೆ ಗುಣಸಂಪನ್ನರಾಗಿರು ವರ. ನಟರು ಅಭಿನಯಿಸಿದ ಕತೆಯ ರಸವನ್ನು ಉಣ್ಣತಕ್ಕವರು ನೋಟ ಕರು, ಇವರು ಸ್ವತಃ ರಸಿಕರಿದ್ದರೇ ನೋಟವು ರಸಮಯವಾಗುವುದು.

ನಾಟಕ ಮಂದಿರ

ರಂಗಃ ನಾಟಕವನ್ನು ಪ್ರಯೋಗಿಸುವ ಸ್ಥಳವೇ ನಾಟಕ ಮಂದಿರವು. ಹಿಂದೆ ರಾಜಸ್ಥಾನದಲ್ಲಿ, ಜನಸಾಮಾನ್ಯರಲ್ಲಿ ಉಪಯೋಗಿಸುವ ಮಂದಿರವು ಬೇರೆಯಾಗಿತ್ತು. ಜನಸಾಮಾನ್ಯರಿಗೆ, ಬಯಲು, ದೇವಸ್ಥಾನದ ಮುಂಭಾ ಗವೇ ರಂಗಸ್ಥಳವು. ಈಗಲೂ ಬಯಲಾಟವನ್ನು ಆಡುವವರಿಗೆ ಬಯಲೇ ರಂಗಭೂಮಿಯು. ಊರವರು ಕಲೆತು ವಿಶಾಲವಾದ ಬಯಲಿನ ಮಧ್ಯ ದಲ್ಲಿ ರಂಗಪೀಠವನ್ನು ತಯಾರಿಸುವರು. ಅಂತಸ್ತಿನ 'ಚಪ್ಪರ' ಹಾಕು ವರು. ಬಣ್ಣದ ಕಾಗದ, ತಳಿರುತೋರಣಗಳಿಂದ ಅಲಂಕರಿಸುವರು. ರಂಗಸ್ಥಳದ ಹಿಂಭಾಗದ ಸ್ವಲ್ಪ ದೂರದಲ್ಲಿ ಬಣ್ಣದ ಮನೆಗಾಗಿ ವ್ಯವಸ್ಥೆ ಮಾಡುವರು. ರಂಗಸ್ಥಳದ ಎದುರಿನ ಮೂರು ಭಾಗವನ್ನು ಪ್ರೇಕ್ಷಕರಿಗೆ ಕುಳಿತುಕೊಳ್ಳಲು ಏರ್ಪಡಿಸುವರು. ಇದರಲ್ಲಿ ಸ್ತ್ರೀಯರಿಗೆ ಪ್ರತ್ಯೇಕವಾದ ಸ್ಥಳವನ್ನು ಇರಿಸುವರು. ರಂಗಸ್ಥಳದ ಹಿಂದಿನ ಭಾಗದ ಮಧ್ಯದಲ್ಲಿ ಭಾಗ ವತ ಮತ್ತು ಹಿಮ್ಮೇಳದವರಿಗೆ ಎತ್ತರದ 'ಮಂಚ'ವನ್ನು ಹಾಕುವರು. ಹಿಮ್ಮೇಳದವರ ಎರಡು ಪಕ್ಕಗಳಲ್ಲಿ ವೇಷಧಾರಿಗಳಿಗೆ ರಂಗಸ್ಥಳಕ್ಕೆ ಬಂದು ಹೋಗಲು ಸ್ಥಳವಿರುವುದು. 'ಪರದೆ'ಗಳು ಇಲ್ಲ; ಬದಲು ಒಂದೇ 'ತೆರೆ ಮರೆ'ಯನ್ನು ಉಪಯೋಗಿಸುವರು.

'ಕಂಪೆನಿ' ಮತ್ತು ಶಾಲಾ ಕೋಲೇಜುಗಳ ನಾಟಕ ಮಂದಿರವು ಬಂದ ಕ್ಕೊಂದು ಹೋಲುವುದು. ಇಲ್ಲಿಯ ಮಂದಿರವು ಆಯತಾಕಾರದಲ್ಲಿದೆ.

ಒಂದು ಕೊನೆಯಲ್ಲಿ, ವೇಷಭೂಷಣ ಹಾಕಿಕೊಳ್ಳುವುದು. ಅದರ ಮುಂದು ಗಡೆಯಲ್ಲಿ ಎತ್ತರವಾದ ರಂಗಪೀಠವಿರುವುದು. ರಂಗಪೀಠವನ್ನು ಪ್ರವೇಶಿಸಲು ಎರಡು ಕಡೆಯಲ್ಲೂ ಸ್ಥಳವಿರುವುದು. ರಂಗಪೀಠವನ್ನು ಅಂಕ್ಕ, ಮಾರ್ಗ, ತೋಟ, ಮನೆ, ಅರಮನೆ, ಅರಣ್ಯ ಇವೇ ಮೊದಲಾದ 'ಪರದೆ' ಗಳಿಂದ ಬೇರಾದಂತೆ ವಿಂಗಡಿಸಿಕೊಳ್ಳುವರು. ಪರದೆಗಳ ಎರಡು ಕಡೆಗಳಲ್ಲಿ ಇಳಿಬಿಟ್ಟಿರುವ ಕಿರುಪರದೆಗಳಿರುವುವು. ಪ್ರತಿ ಪರದೆಗಳ ಮಧ್ಯೆ ಮೇಲು ಗಡೆಯಲ್ಲಿ ನೆರಿಗೆಯ ಲೋವೆಗಳಿರುವುವು

ರಂಗಪೀಠದ ಮುಂದುಗಡೆ ರಂಗಕ್ಕಿದಿರಾಗಿ ಹಿಮ್ಮೇಳದವರು ಕುಳಿತು ಕೊಳ್ಳುವರು. ವಿಕ್ಕುಳದ ಭಾಗವನ್ನು ವಿಂಗಡಿಸಿ ಜಾತಿವಾರಾಗಿ (ಟೀಕೆಟಿಗೆ ತಕ್ಕ) ಪ್ರೇಕ್ಷಕರು ಕುಳಿತುಕೊಳ್ಳುವರು. ಇಲ್ಲಿ ರಂಗಭೂಮಿಯ ಎದುರು ಬದಿಯಲ್ಲಿ ಅಲ್ಲದೆ, ಬೇರೆಡೆ ನೋಟಕರು ಕುಳಿತುಕೊಳ್ಳಲು ಸಾಧ್ಯವಿಲ್ಲ; ಪೂರ್ಣ ನಾಟಕವನ್ನು ಸುಲಭವಾಗಿ ನೋಟಕರು ಇದಿರಾಗಿ ನೋಡುವುದಕ್ಕೆ ಪ್ರಯಾಸವಿರುವುದಿಲ್ಲ. ಮಾತು, ಹಾಡು ಸ್ಪಷ್ಟವಾಗಿ ಕೇಳುವುದು. ದೃಶ್ಯ ಅಭಿನಯಗಳು ಸ್ಪಷ್ಟವಾಗಿ ಕಾಣುವುವು. ಇದರಿಂದ ಪ್ರೇಕ್ಷಕರು ಶುದ್ಧಮನಸ್ಕರಾಗಿ, ಏಕಾಗ್ರತೆಯಿಂದ ನಾಟಕದಲ್ಲಿ ಲೀನರಾಗಲು ಆಸ್ಪದವಿದೆ. ನಟರ ಗುಣದೋಷಗಳನ್ನು ತಿಳಿಯಲು ಎಡೆಯಿದೆ.

ಕಲಾಸೇವೆ

ನಾಟಕ ಕಲೆಯ ಪ್ರಾಚೀನತೆಯನ್ನು ಕಾಣುವಾಗ ಭಾರತವು ನಾಟಕ ಕಲೆಗೆ ಉಗಮಸ್ಥಾನವೆನಿಸಿದೆ. ಈ ವಿಚಾರದಲ್ಲಿ ಭಾರತ ಗ್ರೀಸ್‌ನಷ್ಟೆ ಪ್ರಖ್ಯಾತವು. ಗ್ರೀಸ್‌ನವರು 'ಡಯೋನಿಸಸ್' ದೇವತೆಯ ಆರಾಧನೆಯಲ್ಲಿ ಸ್ತೋತ್ರ ಗೀತವನ್ನು ವೇಷಧರಿಸಿ ಹಾಡಿಯೂ, ನೃತ್ಯವಾಡಿಯೂ ಪೂಜೆ ಸಲ್ಲಿಸುತಿದ್ದರು. ಈ ಸನ್ನಿವೇಶದಿಂದ ಅಲ್ಲಿ ನಾಟಕ ಬೆಳೆಯಿತು. ಭಾರತದಲ್ಲಿ ಮೂಲತಃ ಕುಣಿತದಿಂದಲೇ ನಾಟಕವು ಹುಟ್ಟಿಕೊಂಡಿತು. ವಿಧಿ, ದೈವಗಳು ನಾಟಕಗಳಿಗೆ ಪ್ರೇರಕ ಶಕ್ತಿಯಾದವು. ಹಲವು ಮಂದಿ ಕವಿಗಳು ಸಂಸ್ಕೃತದಲ್ಲಿ ನಾಟಕಗಳನ್ನು ಬರೆದರು. ಈ ನಾಟಕಕಾರರಲ್ಲಿ ಅಶ್ವಘೋಷ, ಭಾಸ, ಕಾಳಿದಾಸ, ಭವಭೂತಿ, ಶೂದ್ರಕ ಮೊದಲಾದವರು

ಆದಿಪುರುಷರಾದರು. ರಾಜಾಶ್ರಯದಿಂದ ಸಂಸ್ಕೃತ ನಾಟಕಗಳು ಬೆಳೆದವು.

ಭಾರತೀಯ ನಾಟಕಗಳು ವಿಲಕ್ಷಣವಾದ ರಚನಾ ಶಕ್ತಿಯಿಂದಲೂ, ಸುಖ ಮತ್ತು ಶೋಕಮಯ ಅವಸಾನಗಳ ಭೇದವಿಲ್ಲದಿರುವಿಕೆಯಿಂದಲೂ ಪಾಶ್ಚಾತ್ಯ ನಾಟಕಗಳಿಗಿಂತಲೂ ಪ್ರತ್ಯೇಕವಾಗಿದ್ದು ಗುಣಪೂರಿತವಾಗಿವೆ. ಪಾಶ್ಚಾತ್ಯ ವಿಮರ್ಶಕರು ಶಾಕುಂತಲ, ಮೃಚ್ಛಕಟಿಕದಂತಹ ನಾಟಕಗಳನ್ನು ಕಂಡು ತಲೆದೂಗಿರುವರು. ಅಲ್ಲದೆ ಭಾರತೀಯ ನಾಟಕಗಳು ಅತಿ ಗಂಭೀರವೆಂದು ಅಭಿಪ್ರಾಯಪಟ್ಟಿರುವರು.

ಕನ್ನಡ ಭಾಷೆಯಲ್ಲಿ ಸಿಕ್ಕಿರುವ ಮೊದಲ ನಾಟಕವು 'ಮಿತ್ರವಿಂದಾ ಗೋವಿಂದ'ವು. ಈ ನಾಟಕದ ಕಾಲವು ಹದಿನೇಳನೆಯ ಶತಮಾನವು. ಆದರೂ ಧಾರವಾಡ ಪ್ರಾಂತದಲ್ಲಿ ದೊರೆತ ಕ್ರಿ. ಶ. ೧೧೪೫ರ ಶಾಸನದಲ್ಲಿ "........ಶ್ರೀ ಮನ್ಮಹಾ ಸಾಮಂತಂ ಮಾರ್ತಾಂಡಯ್ಯಂ ತಮ್ಮ ಪುತ್ರಯ್ಯಂ ಮಾಡಿಸಿದ ಬಸದಿಯಂ ಪಡಿಸಲಿಸಿ ನಾಟಕ ಶಾಲೆಯಂ ಮಾಡಿಸಿ ತನ್ನ ಕೀರ್ತಿ ಶಿಳಾಸ್ತಂಭಮಂ ನಿಲಿಸಿದ" ಎಂದಿದೆ. ಇದಲ್ಲದೆ ನಾಟಕೀಯವನ್ನು ಸಾರಿದ ಬೇರೆ ಹಲವು ಶಾಸನಗಳು ಸಿಕ್ಕಿವೆ. ಕಾವ್ಯಗಳ ಹೇಳಿಕೆಗಳು ಬೇಕಷ್ಟಿವೆ ಈ ಆಧಾರದ ಮೇಲೆ ಕನ್ನಡ ನಾಡಿನಲ್ಲಿ ಆದಿಯಿಂದಲೂ ನಾಟಕಶಾಲೆಗಳಿದ್ದವೆಂದು ಸಂಶೋಧಕರು ನಿರ್ಧರಿಸಿರುವರು

ಕರ್ನಾಟಕದ ಹಲವು ಮಂದಿ ಸಾಮ್ರಾಟರು ನಾಟಕ ಕಲೆಯ ಪೋಷಕರಾಗಿ ಮೆರೆದರು. ಆಸ್ಥಾನದಲ್ಲಿ ಚಿತ್ರರಚನಾ ಕೌಶಲ್ಯದಿಂದ ಕೂಡಿ ರಂಗಭೂಮಿಯನ್ನು ನಿರ್ಮಾಣ ಮಾಡಿ ನಾಟಕಗಳನ್ನು ಆಡಿಸುತಿದ್ದರಲ್ಲದೆ, ನಟ, ನಟಿಯರನ್ನು ಆಸ್ಥಾನದಲ್ಲಿ ಇರಿಸಿಕೊಳ್ಳುತಿದ್ದರು.

ಇನ್ನೂ ಕೆಲವರು ದೇವಾಲಯದ 'ರಂಗಭೋಗ'ಗಳಿಗಾಗಿ ದತ್ತಿ ಬಿಟ್ಟಿದ್ದರು. ಅಲ್ಲಿ ನಾಟಕ, ನೃತ್ಯ ಇತ್ಯಾದಿಗಳನ್ನು ಪ್ರದರ್ಶಿಸುತಿದ್ದರು. ಈ ಕಲಾಸೇವೆಯನ್ನು ದೇವರ ಸೇವೆಯೆಂದು ತಿಳಿಯುತಿದ್ದರು. ಇದರಿಂದ ಕನ್ನಡ ನಾಡಿನಲ್ಲಿ ನಾಟಕ ಕಲಾಸೇವೆಯ ಹಿರಿಮೆ ಎಷ್ಟಿತ್ತೆಂಬುದು ವ್ಯಕ್ತವಾಗುವುದು.

ಕನ್ನಡದ ಹಿರಿಯರಿಗೆ ಕಲೆಯಲ್ಲಿದ್ದ ಆದರ ಅಭಿಮಾನವನ್ನು ಈಗಲೂ ಬೇಲೂರು, ಹಳೆಬೀಡು ಮೊದಲಾದ ಪುರಾತನ ದೇವಾಲಯಗಳು ಸಾರುತ್ತಿವೆ. ಇಲ್ಲಿಯ ಕೆತ್ತನೆಯ ಬೊಂಬೆಗಳು ಸುಖ, ದುಃಖ, ರೌದ್ರ, ವಾತ್ಸಲ್ಯ, ಕರುಣೆ, ಇವೇ ಮೊದಲಾದ ಮನೋಭಾವಗಳನ್ನು ಸೂಸುತ್ತಿವೆ. ಇವುಗಳು ಅಭಿನಯದ ಭಾವ, ಭಂಗಿ, ಮುದ್ರೆ, ಕುಣಿಕೆಯನ್ನು ಒಳಗೊಂಡಿವೆ. ಇವುಗಳಿಂದ ಪೂರ್ವಜರು ಕಲೆಯನ್ನು ಎಷ್ಟರ ಮಟ್ಟಿಗೆ ಜೀರ್ಣಿಸಿರುವರೆಂದು ತಿಳಿಯಬಹುದು; ಅಲ್ಲದೆ ಇಂದಿನವರಿಗೆ ಮಾರ್ಗದರ್ಶಕವೂ ಆಗಿವೆ.

ಕರ್ನಾಟಕದಲ್ಲಿ ಹಲವು ಸಂಘ ಸಂಸ್ಥೆಗಳು, ನಾಟಕ ಕಲೆಯನ್ನು ಬೆಳಗಿಸಿದವು. ಇವುಗಳಲ್ಲಿ ಹಲವು ಮಂದಿ ನಟ, ನಟಿಯರು ತಮ ಜೀವನವನ್ನು ಧಾರೆಯೆರೆದರು. ಹಗಲೆಲ್ಲಾ ಅಭ್ಯಾಸಮಾಡಿ, ರಾತ್ರಿಯೆಲ್ಲಾ ನಿದ್ದೆಕೆಟ್ಟು ಅಭಿನಯಿಸಿ ಸಂಸ್ಥೆಗಳ ಏಳಿಗೆಗಾಗಿ ದುಡಿದರು. ಕಲಾಸೇವಾ ವೃತ್ತಿಯು ಶ್ರೇಷ್ಠ ಹಾಗೂ ಅಮೂಲ್ಯವಾದುದೆಂದು ಭಾವಿಸಿ, ಕಷ್ಟ, ಕಾರ್ಪಣ್ಯಗಳನ್ನು ಸಹಿಸಿದರು. ಅವರ ತ್ಯಾಗದ ಫಲದಿಂದ ನಾಟಕ ಕಲೆಯು ಇಂದಿಗೂ ಜೀವಂತವಾಗಿ ಉಳಿದಿರುವುದು.

ಈ ಕಲೆಯ ಗೌರವ ಪ್ರತಿಷ್ಠೆಯನ್ನು ಕಾಪಾಡುವ ಭಾಗ್ಯವು ಇಂದಿನವರ ಪಾಲಿಗೆ ಬಿದ್ದಿದೆ. ಸರಕಾರದವರು ನಾಟಕಕಲೆಗೆ ಪ್ರೋತ್ಸಾಹ ಕೊಡುತ್ತಿರುವರು. 'ಯಥಾ ರಾಜಾ ತಥಾ ಪ್ರಜಾ' ಎನ್ನುವಂತೆ ಅಲ್ಲಲ್ಲಿ ಕಲಾಸಂಘಗಳು ಹುಟ್ಟಿ, ತರುಣರಲ್ಲಿ ಸ್ಪರ್ಧಾ ಭಾವನೆ ನೆಲೆಗೊಳಿಸುವ ಕಾರ್ಯವನ್ನು ಕೈಗೊಂಡಿವೆ.

ಈ ಹೋರಾಟದ ಗೋಜಿನಲ್ಲಿ, ನಾಟಕಕಲೆಯ ಸೌಂದರ್ಯವನ್ನು ಅಂದಗೆಡಿಸದೆ, ರಕ್ಷಿಸುವ ಹೊಣೆಗಾರಿಕೆಯು ತರುಣರ ಪಾಲಿಗಿದೆ. ಅದಕ್ಕಾಗಿ ಪರಿಶ್ರಮಪಡಬೇಕು; ಸೇವೆ ಒಪ್ಪಿಸಬೇಕು. ಆಗ ಜಗನ್ನಿಯಾಮಕನು ಮೆಚ್ಚುವನು. ಅದರೊಂದಿಗೆ ಕಲಾರಾಧಕನ ಬಾಳು ಸಾರ್ಥಕಹೊಂದುವುದು. ಭಾರತೀಯರು ತಮ್ಮತನವನ್ನು ಮರೆಯದೆ, ತಮ್ಮ ಕಲೆಗಳನ್ನು ಅಭ್ಯಾಸಮಾಡಲೆಂದು ಹಾರಯಿಸುತ್ತೇನೆ.

ಪ್ರತಿ ವಾರವೂ ಕೊಂಡುಕೊಳ್ಳಿರಿ!

"ಒಂದಾಣೆ ಮಾಲೆ"ಯ ಪುಸ್ತಕಗಳು, ಪ್ರತಿ ವಾರ ಪ್ರಕಟವಾಗುತ್ತಿವೆ. ಹೊಸ ಹೊಸ ವಿಷಯಗಳ ಮೇಲೆ ಪುಸ್ತಕಗಳು ಹೊರಡುತ್ತಿವೆ. 1954ನೇ ಸಪ್ಟಂಬರದಿಂದ 1956ನೇ ಜೂನ್ ತಿಂಗಳ ಮೊದಲನೇ ವಾರದವರೆಗೆ 89 ಪುಸ್ತಕಗಳು ಪ್ರಕಟವಾಗಿದ್ದು, ಇನ್ನೂ ಪ್ರತಿ ವಾರ ಒಂದೊಂದು ಹೊಸ ಪುಸ್ತಕ ಹೊರಡುತ್ತಲೇ ಇದೆ.

89 ಆಣೆಗಳಿಗೆ 'ಒಂದಾಣೆ ಮಾಲೆ'ಯು, ಹೊದಿಕೆ ಕೂಡಿ, ಒಟ್ಟು 1916 ಪುಟಗಳನ್ನು ಕೊಟ್ಟಿರುತ್ತದೆ. ಇಷ್ಟು ಮೊಬಲಗಿಗೆ ಇಷ್ಟು ಪುಟಗಳನ್ನು ಬೇರೆ ಎಲ್ಲಿಯೂ ಯಾವ ಪ್ರಕಟಣೆಯೂ ಕೊಟ್ಟಿಲ್ಲ.

ವಿದ್ವಾಂಸರು ಮಾತ್ರ 'ಒಂದಾಣೆಮಾಲೆ'ಗೆ ಬರೆಯುತ್ತಾರೆ. 'ಅಶ್ಲೀಲ' ಎಂಬ ಅಂಶವೇ ಒಂದಾಣೆಮಾಲೆ'ಯ ಪ್ರಕಟಣೆಗಳಲ್ಲಿರುವುದಿಲ್ಲ.

'ಒಂದಾಣೆಮಾಲೆ' ಪುಸ್ತಕಗಳು ಚಿಕ್ಕ ವಿದ್ಯಾರ್ಥಿಗಳಿಂದ ವಯೋವೃದ್ಧರ ವರೆಗೆ, ಪ್ರತಿಯೊಬ್ಬನಿಗೂ ಅವಶ್ಯ ಇವೆ. ಇಷ್ಟು ಸುಲಭ ಬೆಲೆಯಲ್ಲಿ ಇಷ್ಟು ಉತ್ತಮ ಸಾಹಿತ್ಯವು, ಈ ಮೊದಲು ಎಲ್ಲಿಯೂ ಒದಗಿಸಲ್ಪಟ್ಟಿಲ್ಲ.

'ಒಂದಾಣೆ ಮಾಲೆ' ಪುಸ್ತಕಗಳನ್ನು ಟಪ್ಪಾಲು ದ್ವಾರಾ ತರಿಸಿಕೊಳ್ಳುವವರು ರೂ. 4—8—0ನ್ನು ಮನಿಯಾರ್ಡರ್ ಮೂಲಕ ಕಳಿಸತಕ್ಕದ್ದು. ಡಿಪಾಜಿಟ್ ಇಡುವವರು ಮಾತ್ರ ಏಜನ್ಸಿಗಾಗಿ ಬರೆದುಕೊಳ್ಳತಕ್ಕದ್ದು.

ವಾರಕ್ಕೆ ಕೇವಲ ಒಂದಾಣೆ ವ್ಯಯದಿಂದ ಒಂದು ಉತ್ಕೃಷ್ಟ—ಉಪಯುಕ್ತ ಪುಸ್ತಕವನ್ನು ಹೊಂದುವ ಈ ಯೋಜನೆಯ ಸದುಪಯೋಗ ಮಾಡಿಕೊಳ್ಳಿರಿ.

ಈ ವರೆಗೆ ಪ್ರಕಟವಾದ ಪುಸ್ತಕಗಳ ಹೆಸರುಗಳನ್ನು ಈ ಪುಸ್ತಕದ ಹೊದಿಕೆಯ ಎರಡನೇ ಪುಟದಲ್ಲಿ ನೋಡಿರಿ.

ಒಂದಾಣೆ ಮಾಲೆ, ಪ್ರಭಾತ ಆಫೀಸು, ರಥಬೀದಿ,
ಮಂಗಳೂರು-1.

ANNA PUBLICATIONS, CAR STREET, MANGALORE-1.

Edited, Printed & Published by K. V. Shenoy
at The Prabhat Printers, Ltd., Mangalore.